**<u>ದಿನಾಂಕಃ 19.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ವಾದಿ ಪರ ಶ್ರೀ ಜಿ.ವಿ.ಎನ್. ವಕೀಲರಿಂದಃ</u>**

1) ನನಗೆ ಪ್ರಸ್ತುತ 71 ವರ್ಷ ವಯಸ್ಸು. ನಾನು ಕಾರ್ಮಿಕ ಇಲಾಖೆಯಲ್ಲಿ ಗುಮಾಸ್ತನಾಗಿ ಕರ್ತವ್ಯ ಮಾಡುತ್ತಿದ್ದೆನು. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ರಮೇಶ್ ಬಾಬು ರವರು ನನ್ನ ಮತ್ತು ಪ್ರೇಮಕುಮಾರಿ ರವರ ವಿರುದ್ಧ ಈ ದಾವೆಯನ್ನು ಹೂಡಿರುತ್ತಾರೆ. ನಿಡಿ.2 ರ ಜಿಪಿಎ ನಲ್ಲಿ ತಿಳಿಸಿದಂತೆ 3ನೇ ಪ್ರತಿವಾದಿಗೆ ಅನಾರೋಗ್ಯ ಇತ್ತು ಎಂದು ತೋರಿಸುವ ಸಂಬಂಧ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆಕೆ ನನಗಿಂತ ಕಿರಿಯವಳು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡಿರುತ್ತೇನೆ.

2) ದಾವಾ ಸ್ವತ್ತನ್ನು ನಾವು ಖರೀದಿ ಮಾಡುವ ಪೂರ್ವದಲ್ಲಿ ಆ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆ ಯಾವುದಾದರೂ ಕ್ರಯದ ವ್ಯವಹಾರ ಆಗಿತ್ತೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈ ಹಿಂದೆ ಆಗಿದ್ದ ಯಾವುದೇ ವ್ಯವಹಾರಗಳನ್ನು ತಿಳಿದುಕೊಳ್ಳದೇ ಖರೀದಿ ಮಾಡಿರುತ್ತೀರೀ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ನಾವು ಕಾನೂನು ತಜ್ಞರಿಂದ ಸಲಹೆಯನ್ನು ಪಡೆದಿರುವುದಿಲ್ಲ. ದಾವಾ ಸ್ವತ್ತನ್ನು ನಾವು 2ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತೇವೆ. 2ನೇ ಪ್ರತಿವಾದಿಯು ದಾವಾ ಸ್ವತ್ತನ್ನು 1ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದರು.

3) 1ನೇ ಪ್ರತಿವಾದಿಯು ವಾದಿಗೆ ದಾವಾ ಸ್ವತ್ತಿನ ಕುರಿತು ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದರು ಎಂಬ ಬಗ್ಗೆ ನನಗೆ ತಿಳಿದಿರಲಿಲ್ಲ. ಆ ರೀತಿ ಯಾವುದಾದರೂ ಕರಾರು ಪತ್ರ ಆಗಿರುತ್ತದೆಯೇ ಎಂಬ ಬಗ್ಗೆ ನಾವು ವಿಚಾರಣೆ ಮಾಡಿರುವುದಿಲ್ಲ. ದಿಃ13.01.2012 ರಂದು 1ನೇ ಪ್ರತಿವಾದಿ ಮತ್ತು ವಾದಿಯ ನಡುವೇ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ.2 ರ ಕ್ರಯದ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ14.08.2012 ರಂದು 1ನೇ ಪ್ರತಿವಾದಿಯು ನಿಪಿ.2 ರ ಕ್ರಯದ ಕರಾರು ವ್ಯವಹಾರವನ್ನುಮರೆಮಾಚಿ

ದಾವಾ ಸ್ವತ್ತನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿರಲಿಲ್ಲ.

4) ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಆ ಸ್ವತ್ತಿನ ಮೂಲ ಮಾಲೀಕರು ಯಾರು ಹಾಗೂ ನಾನು ಖರೀದಿಸುವ ಪೂರ್ವದಲ್ಲಿ ಯಾರು ಮಾಲೀಕರು ಇದ್ದರು ಎಂಬ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. 2ನೇ ಪ್ರತಿವಾದಿಯು ಕ್ರಯ ಪತ್ರ ಬರೆದುಕೊಟ್ಟಿರುವ ಕಾಲಕ್ಕೆ ಆ ಪತ್ರದಲ್ಲಿ ಮುಂದೆ ಯಾವುದಾದರೂ ತಂಟೆ ತಕರಾರು ಉದ್ಭವಿಸಿದ್ದಲ್ಲಿ ಅದನ್ನು ಆಕೆ ಸರಿಪಡಿಸಿಕೊಡುವುದಾಗಿ ಒಪ್ಪಿ ಷರತ್ತನ್ನು ಹಾಕಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತನ್ನು ನಾನು ಖರೀದಿ ಮಾಡುವ ಕಾಲಕ್ಕೆ 2ನೇ ಪ್ರತಿವಾದಿಯು ಸ್ಥಳದಲ್ಲಿ ಹಾಜರಿದ್ದರು.

5) ಈ ಪ್ರಕರಣದಲ್ಲಿ ನಮಗೆ ನ್ಯಾಯಾಲಯದಿಂದ ಸಮನ್ಸ ಬಂದ ಮೇಲೆ ವಾದಿಯು 1 ಮತ್ತು 2ನೇ ಪ್ರತಿವಾದಿಗಳ ವಿರುದ್ಧ ನಾವು ಖರೀದಿ ಮಾಡಿರುವ ದಾವಾ ಸ್ವತ್ತಿನ ಸಂಬಂಧ ಪ್ರಕರಣ ಹೂಡಿರುವುದಾಗಿ ತಿಳಿದುಬಂದಿತ್ತು. ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಋಣಭಾರ ಪ್ರಮಾಣ ಪತ್ರವನ್ನು ಪಡೆದು ಪರಿಶೀಲನೆ ಮಾಡಿರುವುದಿಲ್ಲ. ನ್ಯಾಯಾಲಯದಿಂದ ನಮಗೆ ಸಮನ್ಸ ಬಂದ ನಂತರ ನಾವು 2ನೇ ಪ್ರತಿವಾದಿಯನ್ನು ಭೇಟಿ ಮಾಡಲು ಹೋಗಿದ್ದೆವು, ಆದರೆ ಆಕೆ ನಮಗೆ ಸಿಗಲಿಲ್ಲ. ಯಾವ ಪರಿಹಾರ ಕೋರಿ ಈ ದಾವೆಯನ್ನು ವಾದಿ ಹೂಡಿರುತ್ತಾರೆ ಎಂದು ನನಗೆ ತಿಳಿದಿದೆ. ದಿಃ12.01.2015 ರಂದು ವಾದಿ ರಮೇಶ್ ಬಾಬು ರವರು ದಿಃ13.01.2012 ರಲ್ಲಿ ಆದ ಕ್ರಯದ ಕರಾರಿನ ರಿತ್ಯಾ ಕ್ರಯ ಪತ್ರ ಮಾಡಿಕೊಡುವಂತೆ ನಿರ್ದೇಶನ ಕೋರಿ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಹೂಡಿದ ನಂತರ 1 ಮತ್ತು 2 ನೇ ಪ್ರತಿವಾದಿಗಳಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

6) ಈ ದಾವೆ ಚಾಲ್ತಿಯಲ್ಲಿ ಇರುವ ವಿಚಾರ ನಿಮಗೆ ತಿಳಿದಿದ್ದರೂ ಸಹ ನೀವು ದಿಃ09.02.2015 ರಂದು 2ನೇ ಪ್ರತಿವಾದಿಯಿಂದ ದಾವಾ ಸ್ವತ್ತನ್ನು ಖರೀದಿ ಮಾಡಿರುತ್ತೀರೀ ಎಂದರೆ ಸಾಕ್ಷಿಯು ತನಗೆ ಈ ದಾವೆ ಚಾಲ್ತಿಯಲ್ಲಿರುವ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಿಃ09.02.2015 ರಂದು ಮಾಡಲಾದ ನೊಂದಾಯಿತ ಕ್ರಯ ಪತ್ರದಲ್ಲಿ ತಪ್ಪು ಸಂಗತಿ ಸೇರ್ಪಡೆ ಆಗಿದೆ ಎಂಬ ಕಾರಣಕ್ಕೆ ಪುನಃ ದಿಃ30.03.2019 ರಂದು ತಿದ್ದುಪಡಿ ಕ್ರಯ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ.

ದಿಃ09.02.2015 ರಂದು ಕ್ರಯ ಪತ್ರ ಮಾಡಿಕೊಂಡ 4 ವರ್ಷಗಳ ತರುವಾಯ ನಾವು ನಿಡಿ.6 ರಂತೆ ತಿದ್ದುಪಡಿ ಕ್ರಯ ಪತ್ರವನ್ನು ಮಾಡಿಕೊಂಡಿರುತ್ತೇವೆ. ನಿಡಿ.6 ರ ತಿದ್ದುಪಡಿ ಪತ್ರವನ್ನು ಮಾಡಿಕೊಳ್ಳುವ ಕಾಲಕ್ಕೆ 2ನೇ ಪ್ರತಿವಾದಿಯಾದ ಇಂದ್ರಾಣಿಯವರು ನೊಂದಣಾಧಿಕಾರಿಗಳ ಕಛೇರಿಗೆ ಬಂದಿರಲಿಲ್ಲ. ನಿಡಿ.6 ರ ತಿದ್ದುಪಡಿ ಪತ್ರವನ್ನು ನಾವು ಮಾಡಿಕೊಳ್ಳುವ ಪೂರ್ವದಲ್ಲಿ ನಮಗೆ ಮಾರಾಟ ಮಾಡಿದ 2ನೇ ಪ್ರತಿವಾದಿಗೆ ಆ ರೀತಿ ತಿದ್ದುಪಡಿ ಪತ್ರ ಮಾಡಿಕೊಡುವಂತೆ ಕೋರಿ ನೋಟೀಸನ್ನು ನೀಡಿರುವುದಿಲ್ಲ. ನಿಡಿ.6 ರ ತಿದ್ದುಪಡಿ ಕ್ರಯ ಪತ್ರವನ್ನು 3ನೇ ಪ್ರತಿವಾದಿ ಸ್ವತಃ ಮಾಡಿಕೊಂಡಿರುತ್ತಾರೆ.

7) ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ನೋಟೀಸು ಬಂದ ನಂತರ 1 ಮತ್ತು 2ನೇ ಪ್ರತಿವಾದಿಗಳನ್ನು ಭೇಟಿ ಮಾಡಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯನ್ನು ತಾನು ನೋಡಿರುವುದಿಲ್ಲ ಹಾಗೂ 2ನೇ ಪ್ರತಿವಾದಿಯನ್ನು ಭೇಟಿ ಮಾಡಲು ಹುಡಕಾಟ ಮಾಡಿದ್ದು ಆಕೆ ತನಗೆ ಸಿಗಲಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳು ಇಬ್ಬರೂ ಕೂಡಿ ನಿಮಗೆ ಮೋಸದ ಕ್ರಯಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

8) ವಾದಿಯು 1ನೇ ಪ್ರತಿವಾದಿಗೆ ನಿಪಿ.2 ರ ಕ್ರಯ ಕರಾರು ಪತ್ರದ ರೀತ್ಯಾ ನೊಂದಾಯಿತ ಕ್ರಯ ಪತ್ರ ಮಾಡಿಕೊಡುವಂತೆ ಕಾನೂನುಬದ್ಧ ತಿಳುವಳಿಕೆ ನೋಟೀಸನ್ನು ನೀಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನೋಟೀಸಿಗೆ 1ನೇ ಪ್ರತಿವಾದಿಯು ಪ್ರತ್ಯುತ್ತರ ನೋಟೀಸನ್ನು ನೀಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ 1ನೇ ಪ್ರತಿವಾದಿಯು ತನ್ನ ವಕೀಲರ ಮೂಲಕ ಹಾಜರಾಗಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಗೆ ನೋಟೀಸನ್ನು ಈ ನ್ಯಾಯಾಲಯದ ಮೂಲಕ ದಿನಪತ್ರಿಕೆಯಲ್ಲಿ ಜಾರಿ ಮಾಡಲಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

9) ನನ್ನ ಪ್ರತಿವಾದ ಪತ್ರದಲ್ಲಿ ವಾದಿಯು ನಿಪಿ.2 ರ ಕ್ರಯ ಪತ್ರವನ್ನು ಸುಳ್ಳುಸೃಷ್ಟಣೆ ಮಾಡಿರುವುದಾಗಿ ನಿಲುವು ತೆಗೆದುಕೊಂಡಿದ್ದು ಆ ಸಂಬಂಧ ನಾವು ಆತನ ವಿರುದ್ಧ ಬೇರೆ ಯಾವುದೇ ರೀತಿ ಕಾನೂನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ನಿಪಿ.2 ರ ಕ್ರಯ ಪತ್ರವನ್ನು ಮಾಡಿದ ದಿನಾಂಕದಿಂದ ಮೂರು ವರ್ಷಗಳ ನಂತರದಲ್ಲಿ 2ನೇ ಪ್ರತಿವಾದಿಯು ನಮಗೆ ಕ್ರಯ ಪತ್ರವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಿಪಿ.2 ರ ಕ್ರಯ ಪತ್ರವು ಸುಳ್ಳಿನಿಂದ ಕೂಡಿದೆ ಎಂದು ನುಡಿಯುತ್ತಾರೆ.

10) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 9ನೇ ಖಂಡಿಕೆಯಲ್ಲಿ ತಿಳಿಸಿದಂತೆ 1ನೇ ಪ್ರತಿವಾದಿಯು ಕಾಮಾಕ್ಷಿಪಾಳ್ಯ ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತಾರೆ ಎಂಬ ವಿಚಾರವನ್ನು ನನಗೆ ಈ ಪ್ರಕರಣದಲ್ಲಿ ಸಮನ್ಸ ಬಂದ ನಂತರ ನಾನು ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ಆ ರೀತಿ 1ನೇ ಪ್ರತಿವಾದಿಯು ರೂಪ್ ಸಿಂಗ್, ಕರಿಯಪ್ಪ ಮತ್ತು ಮಂಜುನಾಥ್ ರವರ ವಿರುದ್ಧ ಸಲ್ಲಿಸಿದ ದೂರಿನ ಮೇರೆಗೆ ಏನು ಕ್ರಮ ಕೈಗೊಂಡಿರುತ್ತಾರೆ ಎಂಬ ಮೇರೆಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ದೂರಿನ ಮೇರೆಗೆ ಪೋಲೀಸರು ತನಿಖೆ ನಡೆಸಿ ಅದು ಸುಳ್ಳು ದೂರು ಎಂದು ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತಾರೆ ಎಂಬ ಬಗ್ಗೆ ನನಗೆ ತಿಳಿದಿದ್ದು ಆ ರೀತಿ ದೂರನ್ನು ಮುಕ್ತಾಯಮಾಡಿರುವ ವಿಚಾರ ಸರಿಯಾಗಿ ಇರುತ್ತದೆ.

11) ನಿಡಿ.25 ರ ದಾಖಲೆಗಳ ಜೊತೆ ಹಾಜರುಪಡಿಸಿರುವ ನಿಪಿ.41 ರಿಂದ 43 ರ ದಾಖಲೆಗಳಿಗೂ ಮತ್ತು ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ಸಹಜವಾಗಿ ಎಲ್ಲಾ ಜನಂರಿಗೂ ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಅಸಲುದಾವಾ ಸಂಖ್ಯೆ 106/2018 ರ ಪ್ರಕರಣವನ್ನು ಸಾವಿತ್ರಮ್ಮ ರವರು ಈ ಪ್ರಕರಣದಲ್ಲಿನ ವಾದಿಯ ವಿರುದ್ಧ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ, ಚನ್ನಪಟ್ಟಣದಲ್ಲಿ ಸಲ್ಲಿಸಿರುತ್ತಾರೆ. ಆ ಪ್ರಕರಣ ಇನ್ನೂ ಚಾಲ್ತಿಯಲ್ಲಿ ಇರುತ್ತದೆ. ವಾದಿಯು ಸಾವಿತ್ರಮ್ಮ ರವರ ವಿರುದ್ಧ ಸಿಸಿ 1060/2016 ರಂತೆ ಪ್ರಕರಣ ದಾಖಲಿಸಿದ್ದರು ಎಂಬ ಬಗ್ಗೆ ನನಗೆ ತಿಳಿದಿದೆ. ಆ ಪ್ರಕರಣ ಇನ್ನೂ ಚಾಲ್ತಿಯಲ್ಲಿ ಇರುತ್ತದೆ. ಸಾವಿತ್ರಮ್ಮ ರವರು ವಾದಿಯ ವಿರುದ್ಧ ಸಲ್ಲಿಸಿರುವ ಕ್ರಿಮಿನಲ್ ಪ್ರಕರಣವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ವಜಾ ಮಾಡಿ ಆದೇಶ ಮಾಡಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆದೇಶ ಆದ ನಂತರದಲ್ಲಿ ಅಸಲುದಾವಾ ಸಂಖ್ಯೆ 106/2018 ರ ಪ್ರಕರಣವೂ ಸಹ ಮುಕ್ತಾಯಗೊಂಡಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

12) ನಿಪಿ.2 ರ ಕರಾರು ಪತ್ರವನ್ನು ತಯಾರಿಸಿದ ಬಿಕ್ಲಮ್ ದಾರ ಎನ್ನಲಾದ ಹೆಚ್.ಕೆ.ಸುರೇಶ್ ರವರು ಈ ಪ್ರಕರಣದಲ್ಲಿಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಅವರು ಸುಳ್ಳು ಸಾಕ್ಷ್ಯ ನುಡಿದಿರುವುದಾಗಿ ನುಡಿಯುತ್ತಾರೆ. ನಾನು ಮತ್ತು ಇನ್ನುಳಿದ ಇಬ್ಬರು ಪ್ರತಿವಾದಿಗಳು ಕೂಡಿ ವಾದಿ ರಮೇಶ್ ರವರಿಗೆ ಮೋಸ ಮಾಡುವ ಸಲುವಾಗಿ ದಿಃ09.02.2015 ರಂದು ನಾವು ಕ್ರಯ ಪತ್ರ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ.2 ರ ಕರಾರು ಪತ್ರ ಊರ್ಜಿತತೆ ಹೊಂದಿದ್ದರೂ ಸಹ ವಾದಿಗೆ ತೊಂದರೆ ಕೊಡುವ ಸಲುವಾಗಿ ನಾವು ದಿಃ09.02.2015 ರಂದು ಸುಳ್ಳು ಕ್ರಯ ಪತ್ರ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಡಿ.7 ರಿಂದ 24 ರವರೆಗಿನ ದಾಖಲೆಗಳನ್ನುಈ

ಪ್ರಕರಣಕ್ಕೆ ಅನುಕೂಲವಾಗಲೀ ಎಂಬ ಕಾರಣಕ್ಕೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**